ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ.ಸಿ.ವೇಣುಗೋಪಾಲ್ ರವರು ನಿಯಮ 330 ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಉತ್ತರ

ವಿಷಯ:

ಬೆಂಗಳೂರಿನ ಜಯನಗರ 4ನೇ ಬಡಾವಣೆಯಲ್ಲಿರುವ ಸರ್ವೆ ನಂ. 74/1, 75/2 ಮತ್ತು 75/3 ರಲ್ಲಿರುವ 5 ಎಕರೆ ಜಾಗವು ಮೈಸೂರು ಮಹಾರಾಜರು 1936ರಲ್ಲಿ ಸ್ಮಶಾನ ಮತ್ತು ಪ್ರಾರ್ಥನೆಗೆ ಮಂಜೂರು ಮಾಡಿದ್ದು, ನಂತರ 1965 ಕರ್ನಾಟಕ ವಕ್ಫ್ ಮಂಡಳಿಗೆ ಗೆಜೆಟ್ ಆಗಿರುತ್ತದೆ. ಮುಂದುವರೆದಂತೆ, ದಿನಾಂಕ: 18-02-1999 ರಲ್ಲಿ ಅಂದಿನ ಸರ್ಕಾರ ಬಿಬಿಎಂಪಿ ವಕ್ಫ್ ಮಂಡಳಿಗೆ ಖಾತೆ ನೊಂದಾಯಿಸಿರುತ್ತದೆ. ಏಕಾಏಕಿ ಯಾವುದೇ ಸೂಚನೆ ನೀಡದೇ 2011ರಲ್ಲಿ ನಗರಾಭಿವೃದ್ಧಿ ಇಲಾಖೆ ವಶಕ್ಕೆ ಪಡೆದುಕೊಂಡಿದ್ದು, ಈ ಬಗ್ಗೆ ನ್ಯಾಯಾಲಯದ ಸೂಚನೆ ಇದ್ದರೂ, ನಗರಾಭಿವೃದ್ಧಿ ಇಲಾಖೆಯವರು ವಕ್ಫ್ ಮಂಡಳಿಗೆ ಜಾಗವನ್ನು ಹಿಂತಿರುಗಿಸದೇ ಇರುವುದರ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಉತ್ತರ:-

ಬೆಂಗಳೂರು ಜಯನಗರ 4ನೇ ಬಡಾವಣೆಯಲ್ಲಿರುವ ಸರ್ವೆ ನಂ.74/1, 75/2 ಮತ್ತು 75/3ರಲ್ಲಿರುವ 5.38 ಎಕರೆ ಜಾಗಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶದಂತೆ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿರವರ ಹೆಸರಿನಲ್ಲಿ ನಗರ ಪಾಲಿಕೆಯಲ್ಲಿ 1999 ಖಾತಾ ನೊಂದಾಯಿಸಲಾಗಿರುತ್ತದೆ.

ಮೈಸೂರು ಸರ್ಕಾರದ ದಿನಾಂಕ: 09-09-1958ರ ನಡವಳಿಗಳಲ್ಲಿ ಸದರಿ ಸ್ಥಳದಲ್ಲಿ ಯಾವುದೇ ಕಟ್ಟಡವನ್ನು ನಿರ್ಮಾಣ ಮಾಡದೇ ಮುಸ್ಲಿಂ ಧರ್ಮದ ವತಿಯಿಂದ ಸ್ವಚ್ಛತೆಯನ್ನು ಕಾಪಾಡುವಂತೆ ಆದೇಶಿಸಲಾಗಿರುತ್ತದೆ. ಆದರೆ, ಪ್ರಸ್ತುತ ಸದರಿ ಜಾಗದಲ್ಲಿ ಅನಧಿಕೃತವಾಗಿ ಮಜೀದ್ ಇಸ್ಲಾಮಾಬಾದ್ ಸಂಸ್ಥೆ ವತಿಯಿಂದ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ದಿನಾಂಕ: 09-09-1958ರ ಆದೇಶಕ್ಕೆ ವಿರುದ್ಧವಾಗಿರುವುದರಿಂದ ಹಾಗೂ ಈ ಹಿಂದೆ ಕೆ.ಎಂ.ಸಿ ಕಾಯ್ದೆ 1976 ಕಲಂ 96ರಡಿ ಹೊರಡಿಸಿದ ದಿನಾಂಕ: 18-02-1999 ರ ಆದೇಶವು ಕಾನೂನಿಗೆ ಅನುಗುಣವಾಗಿಲ್ಲದಿರುವುದನ್ನು ಮನಗಂಡು ಸದರಿ ಆದೇಶವನ್ನು ದಿನಾಂಕ: 30-06-2011 ರಲ್ಲಿ ಹಿಂಪಡೆಯಲಾಗಿರುತ್ತದೆ.

ಸದರಿ ಸರ್ಕಾರದ ಆದೇಶವನ್ನು ಪ್ರಶ್ನಿಸಿ ವಕ್ಫ್ ಮಂಡಳಿಯವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 27054/2011 (LB-BBMP) ಅನ್ನು ದಾಖಲಿಸಿದ್ದರು. ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ: 27-08-2018 ರಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ.

> In view of the aforesaid reasons, the writ petition is allowed. Impugned order passed by the State Government dated 30-06-2011 (Annexure-A) is hereby quashed. The matter is remanded to the State Government to re-consider the rival contentions, after giving notice and hearing the petitioner, respondent Nos.3, 4 and 5 and to pass appropriate orders in accordance with law. All the contentions urged by the learned counsel for the parties are kept open.

ಪ್ರಸ್ತುತ ಮಾನ್ಯ ನ್ಯಾಯಾಲಯದ ಆದೇಶದಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರಲ್ಲಿ ಈ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

ಸಂಖ್ಯೆ: ನಅಇ 71 ಎಂಎನ್‌ಜಿ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು